# ಇಲ್ಲಿಂದಲೆ ಕೈಮುಗಿಯುವೆ, ಅಲ್ಲಿಂದಲೆ ಹರಸು



**ಕೊರೊನಾ ದಿನಗಳಲ್ಲಿ ನಡೆಯುತ್ತಿರುವ ಮದುವೆಗಳಿಗೆ ಸರ್ಕಾರದ ಮಾರ್ಗಸೂಚಿ ಅನುಸಾರ ಯಾರನ್ನು ಆಹ್ವಾನಿಸುವುದು, ಯಾರನ್ನು ಬಿಡುವುದು ಎಂದು ಅತಿಥಿಗಳ ಪಟ್ಟಿ ಮಾಡುವುದು ಸವಾಲಿನ ಕೆಲಸ. ಈ ಸಂದಿಗ್ಧ ನಿಮ್ಮದೂ ಆಗಿದೆಯೇ? ಆ ಸಮಸ್ಯೆಗೆ ಸುಲಭ ಪರಿಹಾರ ಈ ಬರಹದಲ್ಲಿದೆ.**

■ **ಜಿ.ವಿ. ಅರುಣ**

ಕೊರೊನಾ ಬಂದ ಮೇಲೆ, ಕಳೆದ ಒಂಬತ್ತು ತಿಂಗಳುಗಳಿಂದ, ನನಗೆ ಯಾವುದೇ ಆಹ್ವಾನಗಳು ಬಂದಿಲ್ಲ – ಜೂಮು, ಜಿ ಮಿಟ್‌ಗಳನ್ನು ಬಿಟ್ಟು. ಒಂದು ಮದುವೆ ಇಲ್ಲ, ಗೃಹಪ್ರವೇಶ, ಮುಂಜಿ, ಜುಟ್ಟು, ನಾಮಕರಣ, ಹುಟ್ಟಿದ ಹಬ್ಬ, ಷಷ್ಟಿಪೂರ್ತಿ... ಯಾವುದೇ ಶುಭ ಸಮಾರಂಭಕ್ಕೆ ಕರೆ ಇಲ್ಲ. ನನಗೆ ಗೊತ್ತಿರುವ ಯಾರಿಗೂ ಈ ರೀತಿಯ ಆಹ್ವಾನಗಳು ಬಂದಿದ್ದು ನನಗೆ ತಿಳಿದಿಲ್ಲ. ಅಂಥದರಲ್ಲಿ ನನ್ನ ಸ್ನೇಹಿತ ಕರೆಮಾಡಿ ಮೊನ್ನೆ ಆಹ್ವಾನ ನೀಡಿದಾಗ ಆಶ್ಚರ್ಯದ ಜೊತೆಗೆ ಹೋಗುವುದೋ ಬೇಡವೋ ಎಂಬ ದ್ವಂದ್ವ ಬೇರೆ ಪ್ರಾರಂಭವಾಗಿತ್ತು.

‘ಮಗಳ ಮದುವೆ ನಿಶ್ಚಯ ಆಯ್ತು ಕಣೋ. ನೀನು ಸೂಚಿಸಿದ್ದ ಗಂಡೇ. ಮುಂದಿನ ತಿಂಗಳು ಮದುವೆ.’ ಫೋನಿನಲ್ಲಿ ನನ್ನ ಸ್ನೇಹಿತ ಹೇಳಿದ.

‘ಓ... ಬಹಳ ಸಂತೋಷ. ನಿನ್ನ ಮಗಳಿಗೆ ವಿಶೇಷವಾಗಿ ನಮ್ಮ ಶುಭಾಶಯಗಳನ್ನು ಹೇಳು’ ಎಂದೆ.

‘ಥ್ಯಾಂಕ್ಸ್, ಅವಳಿಗೆ ಹೇಳ್ತೀನಿ. ಇಲ್ಲಿ ಕೇಳು, ಈ ಸಮಯದಲ್ಲಿ ಮದುವೆ ಏರ್ಪಾಟು ಮಾಡೋದೇ ಒಳ್ಳೆ ತಲೆನೋವು ಆಗಿಹೋಗಿದೆ’ ಎಂದ. ಮದುವೆ ಏರ್ಪಾಟು ಮಾಡುವುದಕ್ಕೂ ಸರ್ಕಾರ ಮಾರ್ಗಸೂಚಿ ಪ್ರಕಟಿಸಿರುವಾಗ ನಿಜವಾಗಿ ಅದು ಸವಾಲಿನ ಕೆಲಸವೇ.

‘ನಾವು ಗಂಡ ಹೆಂಡತಿ ಸೇರಿ ಯಾರನ್ನು ಕರೆಯುವುದು ಅಂತ ನಿರ್ಧಾರ ಮಾಡೋಕೆ ಒಂದು ವಾರ ತೆಗೆದುಕೊಂಡವು. ಈ ಒಂದು ವಾರ ನಾವು ಆಡಿರುವಷ್ಟು ಜಗಳ, ನಮ್ಮ ಜನ್ಮದಲ್ಲಿ ಆಡಿರಲಿಲ್ಲ. ಲಿಸ್ಟಲ್ಲಿ ನಿಂದು 48ನೇ ಹೆಸರು. ಬೇಜಾರು ಮಾಡ್ಕೋಬೇಡ, ನಿನ್ನ ಒಬ್ಬನ್ನೇ ಕರೀತಿರೋದು. ನಿನ್ನ ಹೆಂಡತೀನ ಕರೆಯೋದಕ್ಕೆ ಆಗ್ತಾ ಇಲ್ಲ. ಐ ಆಮ್ ವೆರಿ ಸಾರಿ...’ ಅಂತ ಹೇಳಿದ.

‘ಪರವಾಗಿಲ್ಲ ಬಿಡು. ನೀನು ಬೇಜಾರು ಮಾಡಿಕೊಳ್ಳಬೇಡ, ಈಗ ಪರಿಸ್ಥಿತಿ ಹಾಗೇ ಇದೆ. ನನಗೆ ಅರ್ಥ ಆಗುತ್ತೆ. ಮಗಳ ಮದುವೆ ಆಗ್ತಿದೆಯಲ್ಲ ಅದು ಮುಖ್ಯ. ಬೇಕಾದರೆ ನನ್ನನ್ನೂ ಬಿಟ್ಟುಬಿಡು’ ಅಂತ ಹೇಳಿದೆ. ಕೊನೆಯ ವಾಕ್ಯ ನನ್ನ ಬಾಯಿಂದ ಬಂದದ್ದು, ಹೃದಯದಿಂದ ಅಲ್ಲ ಅಂತ ಅವನಿಗೂ ಗೊತ್ತು.

‘ದೊಡ್ಡ ತ್ಯಾಗ ಮಾಡ್ದೋನ ತರಹ ಆಡಬೇಡ. ಆದರೆ ಇರೋ ವಿಚಾರ ತಿಳಿಸ್ತೀನಿ ನೋಡು. ಹೇಗಪ್ಪ ಹೋಗೋದು? ಅಂತ ನಿನಗೆ ಆತಂಕ ಇದ್ದರೆ ತಿಳಿಸಿಬಿಡು. ನಾನು ತಪ್ಪು ತಿಳಿಯುವುದಿಲ್ಲ. ನಿನ್ನ ಜಾಗಕ್ಕೆ ಕಾಯ್ದಿರಿಸಿರುವವರ ಪಟ್ಟಿಯಿಂದ ಇನ್ನೊಬ್ಬರನ್ನು ಸೇರಿಸುತ್ತೇನೆ. ನಿನಗೆ ಸ್ಪೆಷಲ್ ಕನ್ಸೆಷನ್. ಬರ್ತಿಯೋ ಇಲ್ವೋ ಅಂತ ಈಗಲೇ ಹೇಳಬೇಕಾಗಿಲ್ಲ. ಮದುವೆಗೆ ಒಂದು ವಾರ ಮುಂಚೆ ತಿಳಿಸಿದರೂ ಸಾಕು. ಆಗಲೂ ನೀನು ತಿಳಿಸದೇ ಹೋದರೆ, ನಾನು ಬೇರೆ ಇನ್ಯಾರನ್ನಾದರೂ ಕರೀತೀನಿ. ಸರೀನಾ...’ ಅಂತ ಖಡಕ್ಕಾಗಿ ಹೇಳಿದ.

ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅವನು ಯಾವತ್ತೂ ಈ ರೀತಿ ಖಡಕ್ ಆಗಿರಲಿಲ್ಲ. ವ್ಯಕ್ತಿಯನ್ನು ಪರಿಸ್ಥಿತಿಯ ಒತ್ತಡ ಹೇಗೆ ಬದಲಾಯಿಸುತ್ತೆ ಅಂತ ನನಗೆ ಆಶ್ಚರ್ಯವಾಯಿತು.

‘ಆಗ್ಲಪ್ಪ, ನೀನು ಹೇಳಿದ್ದು ಒಳ್ಳೆಯದಾಯಿತು. ಖಂಡಿತ ನನ್ನ ನಿರ್ಧಾರಾನ ಮೊದಲೇ ತಿಳಿಸ್ತೀನಿ. ನಿನ್ನ ಇಕ್ಕಟ್ಟಿಗೆ ಸಿಲುಕಿಸುವುದಿಲ್ಲ’ ಅಂತ ಆಶ್ವಾಸನೆ ಕೊಡುತ್ತಾ, ‘ಇನ್ನೇನಾದರೂ ಸಹಾಯ ಬೇಕಾಗಿದ್ರೆ ಕೇಳಪ್ಪ...’ ಅಂದೆ.

‘ನಾನು ಫೋನ್ ಮಾಡಿದ್ದೆ ನಿನ್ನ ಸಹಾಯ ಕೇಳಕ್ಕೆ. ನಿನ್ನ ಕರೆಯೋದು ಸೆಕೆಂಡರಿ’ ಅಂತ ಅವನು ಹೇಳಿದಾಗ ನನ್ನ ಎದೆ ‘ಧಸಕ್’ ಅಂತು.

‘ಏನಪ್ಪಾ ಅದು...’ ಅಂದೆ. ಯಾಕೋ ‘ಆ ಬೈಲ್ ಮುಜೆ ಮಾರ್’ ಆಯ್ತಲ್ಲ ಅನ್ನಿಸ್ತು.

‘ನನ್ನ ಹೆಂಡತಿ ಆಹ್ವಾನಪತ್ರಿಕೆ ಪ್ರಿಂಟ್ ಮಾಡಿ ಎಲ್ಲರಿಗೂ ಕಳುಹಿಸಲೇ ಬೇಕು ಅಂತ ಹಟ ಹಿಡಿದಿದ್ದಾಳೆ. ನಾನು ಬಿಲ್‌ಕುಲ್ ಬೇಡ ಅಂತ ಹೇಳ್ತಿದೀನಿ. ಲಗ್ನಪತ್ರಿಕೆ ಹೋದೋರೆಲ್ಲ ಬಂದುಬಿಟ್ಟರೆ, ನನಗೆ ಈಗಿನ ಪರಿಸ್ಥಿತಿಯಲ್ಲಿ ನಿಭಾಯಿಸುವುದಕ್ಕೆ ಖಂಡಿತ ಆಗುವುದಿಲ್ಲ. ಅಲ್ಲದೆ